## ಸೂಕ್ತಿಪ್ರಭ

ನಮ್ರತೆಯೆಂದರೆ ನಿಮ್ಮನ್ನು ಅಲ್ಪವೆಂದು ಪರಿಗಣಿಸುವುದಲ್ಲ, ನಿಮ್ಮ ಬಗ್ಗೆ ಅಲ್ಪ ಚಿಂತಿಸುವುದು.

—*ಅನಾಮಿಕ*

ದೇಹ ಮತ್ತು ಮನಸ್ಸುಗಳ ಆರೋಗ್ಯದ ಗುಟ್ಟು ಅತೀತಕ್ಕೆ ಮರುಗುವುದಲ್ಲ, ಭವಿಷ್ಯವನ್ನು ಚಿಂತಿಸುವುದಲ್ಲ, ಅಥವಾ ಕಷ್ಟವನ್ನು ನಿರೀಕ್ಷಿಸುವುದೂ ಅಲ್ಲ; ಆದರೆ ವರ್ತಮಾನ ಕ್ಷಣದಲ್ಲಿ ವಿವೇಕದಿಂದಲೂ ಪ್ರಾಮಾಣಿಕತೆಯಿಂದಲೂ ಬಾಳುವುದು —*ಬುದ್ಧ*

ನಿಮಗೆ ಮಾಡಲಾಗದುದು ನೀವು ಮಾಡಬಹುದಾದುದಕ್ಕೆ ಅಡ್ಡಿಯಾಗದಿರಲಿ. —*ಜೆ. ವುಡನ್*

ಉಪಯುಕ್ತವಾದುದನ್ನು ಮಾಡುವುದು, ಧೈರ್ಯವಾದುದನ್ನು ನುಡಿಯುವುದು ಮತ್ತು ಸುಂದರವಾದುದನ್ನು ಧ್ಯಾನಿಸುವುದು—ಇವಿಷ್ಟು ಮನುಷ್ಯ ಜೀವನಕ್ಕೆ ಸಾಕು. —*ಟಿ.ಎಸ್. ಈಲಿಯಟ್*

ನಿಜವಾಗಿಯೂ ಅನಂತವಾದವುಗಳು ಇರುವುದು ಎರಡೇ : ಜಗತ್ತು ಮತ್ತು ಮೂರ್ಖತನ. ಜಗತ್ತಿನ ಬಗ್ಗೆ ನಾನು ನಿಶ್ಚಿತವಾಗಿ ಹೇಳಲಾರೆ.

—*ಆಲ್ಬರ್ಟ್ ಐನ್‌ಸ್ಟೈನ್*

ನೀವು ಎಷ್ಟು ಕ್ರಿಯಾಶೀಲರು ಎಂಬುದಕ್ಕಿಂತ ಯಾತಕ್ಕಾಗಿ ಕ್ರಿಯಾಶೀಲರು ಎಂಬುದು ಮುಖ್ಯ. ಜೇನ್ನೊಣವನ್ನು ಹೊಗಳುತ್ತಾರೆ, ಸೊಳ್ಳೆಯನ್ನು ಕೊಲ್ಲುತ್ತಾರೆ. —*ಮೇರಿ ಓ ಕೊನಾರ್*

ಹೃದಯಕ್ಕೆ ಅತ್ಯುತ್ತಮ ವ್ಯಾಯಾಮವೆಂದರೆ ಬಗ್ಗಿ ಜನರನ್ನು ಮೇಲೆತ್ತುವುದು. —ಜಾನ್ ಆ್ಯಂಡ್ರ್ಯೂ ಹೋಮ್ಸ್ (*John Andrew Holmes*)

ತಮ್ಮ ತುಂಬ ತಾವೇ ಇರುವವರಿಗಿಂತ ಹೆಚ್ಚು ಖಾಲಿ ವ್ಯಕ್ತಿಗಳು ಬೇರೊಬ್ಬರಿಲ್ಲ. —*ಆ್ಯಂಡ್ರ್ಯೂ ಜಾಕ್ಸನ್* (*Andrew Jackson*)

ನಮ್ಮ ತಪ್ಪಿನ ಒಂದೇ ಒಂದು ಪ್ರಯೋಜನವೆಂದರೆ, ಅದು ಇತರರಿಗೆ ಆನಂದವನ್ನು ಕೊಡುವುದು.

—*ಅನಾಮಿಕ*

ಆತ್ಮವಿಶ್ವಾಸವಿರುವವನನ್ನು ಎಲ್ಲ ಬಾಗಿಲುಗಳೂ ಬರಮಾಡಿಕೊಳ್ಳುತ್ತವೆ, ಎಲ್ಲ ನಾಲಗೆಗಳೂ ಪ್ರಶಂಸಿಸುತ್ತವೆ, ಎಲ್ಲ ಗೌರವಗಳೂ ಅವನಿಗೆ ಸಲ್ಲುತ್ತವೆ.

—*ಎಮರ್ಸನ್*

ಹೊಗಳುಭಟ್ಟರು ಕೇಳುವವರನ್ನು ಆಶ್ರಯಿಸಿ ಬಾಳುತ್ತಾರೆ ಎಂಬುದನ್ನು ತಿಳಿಯಿರಿ.

—*ಜೀನ್ ದ ಲಾ ಫಾಂಟೈನ್*

# ಪ್ರಾರ್ಥನೆ

## "ಗಣೇಶಾಷ್ಟಕ"ದಿಂದ

ಯತೋಽನಂತಶಕ್ತೇರನಂತಾಶ್ಚ ಜೀವಾ  
ಯತೋ ನಿರ್ಗುಣಾದಪ್ರಮೇಯಾ ಗುಣಾಸ್ತೇ ।  
ಯತೋ ಭಾತಿ ಸರ್ವಂ ತ್ರಿಧಾ ಭೇದ ಭಿನ್ನಂ  
ಸದಾ ತಂ ಗಣೇಶಂ ನಮಾಮೋ ಭಜಾಮಃ ॥ ೧ ॥

ಯಾವಾತನ ಅನಂತ ಶಕ್ತಿಯಿಂದ ಅನಂತ ಜೀವಿಗಳು ಉದಿಸುವುವೊ ಮತ್ತು ಅವು ಯಾವಾತನ ನಿರ್ಗುಣದಿಂದ ಅಪ್ರತಿಮ ಗುಣಗಳುಳ್ಳವುಗಳಾಗುವವೊ ಮತ್ತು ಯಾವಾತನಿಂದ ಎಲ್ಲವೂ ಮೂರು ವಿಧವಾಗಿ ಭಿನ್ನತೆಯಿಂದ ಬೆಳಗುವುವೋ ಅಂತಹ ಗಣೇಶನನ್ನು ನಾವು ಯಾವಾಗಲೂ ನಮಿಸುವೆವು; ಭಜಿಸುವೆವು.

ಯತಶ್ಚಾವಿರಾಸೀಜ್ಜಗತ್ಸರ್ವಮೇತತ್  
ತಥಾಬ್ಜಾಸನೋ ವಿಶ್ವಗೋ ವಿಶ್ವಗೋಪ್ತಾ ।  
ತಥೇಂದ್ರಾದಯೋ ದೇವಸಂಘಾ ಮನುಷ್ಯಾಃ  
ಸದಾ ತಂ ಗಣೇಶಂ ನಮಾಮೋ ಭಜಾಮಃ ॥ ೨ ॥

ಯಾವಾತನಿಂದ ಈ ಎಲ್ಲ ಜಗತ್ತು, ಬ್ರಹ್ಮ, ವಿಶ್ವಪಾಲಕ, ವಿಶ್ವಸಂಹಾರಕ, ಅದರಂತೆ ಇಂದ್ರ ಮೊದಲಾದ ದೇವತೆಗಳ ಸಂಘಗಳು ಮತ್ತು ಮನುಷ್ಯರು ಬೆಳಗುವರೊ ಆ ಗಣೇಶನನ್ನು ನಾವು ಯಾವಾಗಲೂ ನಮಿಸುವೆವು; ಭಜಿಸುವೆವು.

ಯತೋ ವಹ್ನಿ ಭಾನೂ ಭವೋ ಭೂರ್ಜಲಂ ಚ  
ಯತಃ ಸಾಗರಾಶ್ಚಂದ್ರಮಾ ವ್ಯೋಮ ವಾಯುಃ ।  
ಯತಸ್ಥಾವರಾ ಜಂಗಮಾ ವೃಕ್ಷಸಂಘಾಃ  
ಸದಾ ತಂ ಗಣೇಶಂ ನಮಾಮೋ ಭಜಾಮಃ ॥ ೩ ॥

ಯಾವಾತನಿಂದ ಬೆಂಕಿ, ಸೂರ್ಯ, ಶಿವ, ಭೂಮಿ, ಜಲ, ಸಾಗರಗಳು, ಚಂದ್ರ, ಆಕಾಶ, ವಾಯು, ಸ್ಥಾವರ ಜಂಗಮ ಪದಾರ್ಥಗಳು ಮತ್ತು ವೃಕ್ಷಸಮೂಹ ಇರುವವೊ ಆ ಗಣೇಶನನ್ನು ನಾವು ಯಾವಾಗಲೂ ನಮಿಸುವೆವು; ಭಜಿಸುವೆವು.

ಯತೋ ದಾನವಾಃ ಕಿನ್ನರಾ ಯಕ್ಷಸಂಘಾ  
ಯತಶ್ಚಾರಣಾ ವಾರಣಾಃ ಶ್ವಾಪದಾಶ್ಚ ।  
ಯತಃ ಪಕ್ಷಿಕೀಟಾ ಯತೋ ವೀರುಧಶ್ಚ  
ಸದಾ ತಂ ಗಣೇಶಂ ನಮಾಮೋ ಭಜಾಮಃ ॥ ೪ ॥

ಯಾವಾತನಿಂದ ದಾನವರು, ಕಿನ್ನರರು, ಯಕ್ಷಸಂಘಗಳು, ಚಾರಣರು, ಆನೆಗಳು, ಶ್ವಾಪದಗಳು, ಪಕ್ಷಿಗಳು, ಕೀಟಗಳು ಮತ್ತು ಬಳ್ಳಿಗಳು ಇರುವವೊ ಆ ಗಣೇಶನನ್ನು ನಾವು ಯಾವಾಗಲೂ ನಮಿಸುವೆವು; ಭಜಿಸುವೆವು.